2. ಕರ್ನಾಟಕ ಸ್ಟೇಟ್ ಆಗ್ರೋಕಾರನ್ ಪ್ರಾಡಕ್ಟ್ಸ್ ಲಿಮಿಟೆಡ್‌ನ 2012–13ನೇ ಸಾಲಿನ ವಾರ್ಷಿಕ ವರದಿ (ಲೆಕ್ಕಪರಿಶೋಧನಾ ವರದಿ ಒಳಗೊಂಡಂತೆ) ವರದಿಗಳನ್ನು ಮಂಡಿಸುತ್ತೇನೆ.

ಅಧ್ಯಕ್ಷರು : ಮಂಡಿಸಲಾಯಿತು.

4. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು :

1) ವಿಷಯ: ಹೈದರಾಬಾದ್ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ Domicile Certificate ವಿತರಣೆಯಲ್ಲಿ ವಿಳಂಬವಾಗುತ್ತಿರುವ ಬಗ್ಗೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಸಭಾಧ್ಯಕ್ಷರೆ, ಇದು ಬಹಳ ಸಣ್ಣ ವಿಚಾರ, ಪ್ರಮಾಣಪತ್ರವನ್ನು ಕೊಡುತ್ತಿಲ್ಲವೆಂಬ ವಿಷಯ ಅಷ್ಟೇ, ನಾನು ಈ ಬಗ್ಗೆ detail ಆಗಿ ಮಾತನಾಡುವುದಿಲ್ಲ, limited ಆಗಿ ಮಾತನಾಡುತ್ತೇನೆ ಅಷ್ಟೆ.

Article 371(J) amendment ಆದಮೇಲೆ ನೀವು ಅರ್ಥ ಮಾಡಿಕೊಳ್ಳಿ, ನಾನು ವಿಷಯವನ್ನು ಪ್ರಸ್ತಾಪ ಮಾಡುತ್ತೇನೆ. ಇದು debatable subject ಅಲ್ಲ. ಸಣ್ಣ ವಿಷಯವಾಗಿದೆ. ಈ Article 371(J) amendment ಆದಮೇಲೆ ಅಲ್ಲಿರತಕ್ಕಂಥ ಯುವಕರಿಗೆ, ವಿದ್ಯಾರ್ಥಿಗಳಿಗೆ ಆ ಒಂದು ಪ್ರಮಾಣಪತ್ರವನ್ನು ತೆಗೆದುಕೊಳ್ಳಬೇಕು. Assistant Commissioner ಆ ಪ್ರಮಾಣಪತ್ರವನ್ನು ಕೊಡಬೇಕು, order issue ಮಾಡಬೇಕು ಒಂದೊಂದು Assistant Commissioner Office ನಲ್ಲಿ ಹತ್ತು ಸಾವಿರ ಅರ್ಜಿಗಳು ಪೆಂಡಿಂಗ್ ಇವೆ. ಆದ್ದರಿಂದ ಆ ಪ್ರಮಾಣಪತ್ರವನ್ನು issue ಮಾಡುವ ಅಧಿಕಾರವನ್ನು ತಹಶೀಲ್ದಾರ್‌ರವರಿಗೆ ಕೊಡಿ. ಉಳಿದೆಲ್ಲ ಪ್ರಮಾಣಪತ್ರಗಳನ್ನು ಕೊಡುವುದಕ್ಕೆ ತಹಶೀಲ್ದಾರ್‌ರವರಿಗೆ ಅಧಿಕಾರ ಕೊಡುತ್ತಿದ್ದೀರಿ. SC/ST Certificate ಕೊಡುವುದಕ್ಕೆ ವರಮಾನ ಪ್ರಮಾಣಪತ್ರವನ್ನು ಕೊಡುವ ಅಧಿಕಾರ ತಹಶೀಲ್ದಾರ್‌ರವರಿಗೆ ಇದೆ. ಈ ಪ್ರಮಾಣಪತ್ರವನ್ನು ಅಸಿಸ್ಟೆಂಟ್ ಕಮೀಷನರ್‌ಗೆ ವಿತರಣೆ ಮಾಡಲಿಕ್ಕೆ ಅಧಿಕಾರ ಕೊಟ್ಟಿರುವುದರಿಂದ ಏನಾಗಿದೆ ಎಂದರೆ ಇವತ್ತು ಹತ್ತು ಸಾವಿರ ಅರ್ಜಿಗಳು ಬಂದಿರುವುದರಿಂದ ಒಂದೊಂದು ತಿಂಗಳು ವಿಳಂಬವಾಗುತ್ತಿದೆ. ಮೆಡಿಕಲ್ ಸೀಟ್ ಪಡೆಯಲಿಕ್ಕೆ, ಬೇರೆ ಬೇರೆ ಸೀಟ್ ಪಡೆಯಲಿಕ್ಕೆ

ಆ ಪ್ರಮಾಣಪತ್ರ ಕೊಡಬೇಕಾಗಿರುವುದರಿಂದ ಎಲ್ಲದಕ್ಕೂ ತೊಂದರೆಯಾಗಿದೆ. ಹೀಗಾಗಿ ವಿದ್ಯಾರ್ಥಿಗಳು opportunity ಕಳೆದುಕೊಳ್ಳುತ್ತಿದ್ದಾರೆ. ಆದ್ದರಿಂದ Residential Certificate ಕೊಡುವ ಅಧಿಕಾರವನ್ನು ತಹಶೀಲ್ದಾರ್‌ರವರಿಗೆ ಕೊಡುವುದರಿಂದ ಆ ವಿದ್ಯಾರ್ಥಿಗಳಿಗೆ ತಕ್ಷಣ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಬಹಳ delay ಆಗುತ್ತದೆ.

ಅಧ್ಯಕ್ಷರು : ಹೇಳಿ.

ಶ್ರೀ ಟಿ.ಬಿ. ಜಯಚಂದ್ರ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಜಗದೀಶ್ ಶೆಟ್ಟರ್‌ರವರು ತಂದಿರುವಂಥ ವಿಚಾರವನ್ನು ಸರ್ಕಾರ ತೀವ್ರವಾಗಿ ಪರಿಶೀಲನೆ ಮಾಡಿದೆ. ಅದಕ್ಕೆ ನಾವು ವಾಸ್ತವಿಕವಾಗಿ ಉತ್ತರವನ್ನು ಸಹ ಕೊಟ್ಟಿದ್ದೇವೆ. ಅಧ್ಯಕ್ಷರೆ, ಅವರು ಹೇಳಿರುವಂಥದ್ದು ವಾಸ್ತವಿಕ ಸಂಗತಿಯಾಗಿದೆ.

ಅಧ್ಯಕ್ಷರು : ಈ ನೀವು ಏನು ಮಾಡಿದ್ದೀರಿ ಹೇಳಿ,

ಶ್ರೀ ಟಿ.ಬಿ. ಜಯಚಂದ್ರ: Election ಗಾಗಿ Code of Conduct ಇದ್ದ ಕಾರಣ, ಸರ್ಕಾರದಿಂದ guidelines ಏನು issue ಮಾಡಬೇಕಾಗಿತ್ತು ಅದನ್ನು ಮಾಡಿದ್ದೇವೆ. ಅಲ್ಲಿ delay ಆಗಿರುವುದು ನಿಜ. ಅದಕ್ಕೆ ಈಗಾಗಲೇ ಇರತಕ್ಕಂಥ ಪೆಂಡಿಂಗ್ ಅರ್ಜಿಗಳನ್ನು ಕೂಡಲೇ dispose ಮಾಡಬೇಕೆಂದು Assistant Commissioner ರವರಿಗೆ strict ಆಗಿ ಆದೇಶವನ್ನು ಕೊಡುತ್ತೇವೆ.

ಅಧ್ಯಕ್ಷರು : ಅವರು ಹೇಳುವುದು ತಹಶೀಲ್ದಾರ್‌ರವರಿಗೆ ಅಧಿಕಾರ ಕೊಡಿ ಎಂದು.

ಶ್ರೀ ಟಿ.ಬಿ. ಜಯಚಂದ್ರ: Assistant Commissioner ರವರು Domicle Certificate ಕೊಡುವುದನ್ನು ಪ್ರಾರಂಭ ಮಾಡುವುದು. ಇನ್ನು Certificate issue ಮಾಡುವುದಕ್ಕೆ ಪ್ರಾರಂಭವೇ ಮಾಡಿಲ್ಲ, ಈಗಲೇ ನಾವು ಅದನ್ನು Assistant Commissioner ನವರಿಂದ ತಹಶೀಲ್ದಾರ್‌ರವರಿಗೆ change ಮಾಡಿದರೆ ಹೇಗಾಗುತ್ತದೆ ? ನೀವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆಲವು ದಿವಸಗಳವರೆಗೆ ನೋಡೋಣ.

ಶ್ರೀ ಜಗದೀಶ್ ಶೆಟ್ಟರ್: ತಿಂಗಳುಗಟ್ಟಲೆ ಅರ್ಜಿಗಳು ಪೆಂಡಿಂಗ್ ಇವೆ.

ಶ್ರೀ ಟಿ.ಬಿ. ಜಯಚಂದ್ರ: ಸರ್ಕಾರದಿಂದ ಹೋಗಬೇಕಾದ ನಿರ್ದೇಶನಗಳು ತಡವಾದ ಕಾರಣದಿಂದ, code of conduct ಇದ್ದುದರಿಂದ ಪ್ರಮಾಣಪತ್ರ ವಿತರಣೆ

ಆಗುತ್ತಿರಲಿಲ್ಲ. ಈಗ ಎಲ್ಲಾ ರೀತಿಯಿಂದ ಸರಿಯಾಗಿದೆ. ಯಾವುದೇ ರೀತಿ ತೊಂದರೆ ಆಗುವುದಿಲ್ಲ.

ಅಧ್ಯಕ್ಷರು : ಗೋವಿಂದ ಎಂ.ಕಾರಜೋಳ

2) ವಿಷಯ: ಚಾಮರಾಜನಗರ ಜಿಲ್ಲೆಯಲ್ಲಿ ಶ್ರೀ ಸುರೇಶ್, J.E., ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ.

ಶ್ರೀ ಗೋವಿಂದ ಎಂ.ಕಾರಜೋಳ (ಮುಧೋಳ): ಸನ್ಮಾನ್ಯ ಸಭಾಧ್ಯಕ್ಷರೆ, ಚಾಮರಾಜನಗರ ಜಿಲ್ಲೆಯಲ್ಲಿ,

ಅಧ್ಯಕ್ಷರು : ಅದು ಬೇಡ, ನೋಟಿಸಿನಲ್ಲಿ ಯಾವ ವಿಚಾರ ಇದೆ ಅದರ ಬಗ್ಗೆ ಹೇಳಿ.

ಶ್ರೀ ಗೋವಿಂದ ಎಂ.ಕಾರಜೋಳ : ನೋಟೀಸಿನಲ್ಲಿರುವ ವಿಚಾರವೇ,

ಅಧ್ಯಕ್ಷರು : ಅದು ಹೇಗೆ ಬರುತ್ತದೆ? ಅದು ಬೇಡ, ನೋಟಿಸಿನಲ್ಲಿ ಏನು ಕೊಟ್ಟಿದ್ದೀರಿ ಆ ವಿಷಯದ ಬಗ್ಗೆ ಪ್ರಸ್ತಾಪ ಮಾಡಿ.

ಶ್ರೀ ಗೋವಿಂದ ಎಂ.ಕಾರಜೋಳ : ಅದನ್ನೇ, ಅದರ ಆಧಾರದ ಮೇಲೆ ಇರುವುದಕ್ಕೆ ಪ್ರಸ್ತಾಪ ಮಾಡುತ್ತಿದ್ದೇನೆ.

ಅಧ್ಯಕ್ಷರು : ಆಯಿತು, ಚರ್ಚೆ ಮಾಡುವ ಹಾಗಿಲ್ಲ, ನೀವು ಪ್ರಶ್ನೆ ಕೇಳಿ.

ಶ್ರೀ ಗೋವಿಂದ ಎಂ.ಕಾರಜೋಳ : ಸುರೇಶ್ ಎಂಬ Junior Engineer ಸೀಮೆ ಎಣ್ಣೆಯನ್ನು ಸುರಿದುಕೊಂಡು ಆತ್ಮಹತ್ಯೆ ಮಾಡಿಕೊಂಡರು. ಇದು ಮೊದನೆಯದಲ್ಲ, ಗ್ರಾಮ ಪಂಚಾಯಿತಿ ನೌಕರರ ಮೇಲೆ, PDO ಗಳ ಮೇಲೆ, ಗ್ರಾಮ ಪಂಚಾಯಿತಿ ನೌಕರರ ಮೇಲೆ, ಸಾಕಷ್ಟು ದೌರ್ಜನ್ಯ ಪ್ರಕರಣಗಳು ಆಗುತ್ತಿರುತ್ತವೆ. ಅದಕ್ಕಾಗಿ ನಾನು ಸರ್ಕಾರಕ್ಕೆ ಒತ್ತಾಯ ಮಾಡುತ್ತೇನೆ. ಇಂಥ ಪ್ರಕರಣಗಳಲ್ಲಿ ಕಟ್ಟುನಿಟ್ಟಾದ ಕ್ರಮ ತೆಗೆದುಕೊಳ್ಳಬೇಕು.

ಅಧ್ಯಕ್ಷರು : ಇದು demand ಮೇಲೆ ಚರ್ಚೆ ಮಾಡುವಂಥದ್ದಲ್ಲ. ಸೀಮಿತವಾಗಿರುವ ಪ್ರಶ್ನೆ ಇದು.

ಶ್ರೀ ಗೋವಿಂದ ಎಂ.ಕಾರಜೋಳ : ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಕೇಸ್ ಹಾಕಿ ಒಳಗೆ ಹಾಕುವಂಥ ಕೆಲಸ ಮಾಡಬೇಕು ಎಂದು ಒತ್ತಾಯವನ್ನು ಮಾಡುತ್ತೇನೆ.